# ಬೆಟ್ಟದ ಮೇಲಿನ ನಕ್ಷತ್ರಗಳು

■ ತೆಲುಗು ಮೂಲ: **ಯಂಡಮೂರಿ ವೀರೇಂದ್ರನಾಥ್**
■ ಕನ್ನಡಕ್ಕೆ: **ಯತಿರಾಜ್ ವೀರಾಂಬುಧಿ**
ಕಲೆ: ಎಸ್. ವಿಶ್ವನಾಥ್



ವಿಶೇಷ ಕಥೆ

'ಅವನನ್ನು ಅಡುಗೆಮನೆಗೆ ಕರಕೊಂಡು ಬರಬೇಡಾಂತ ನಿನಗೆ ಎಷ್ಟು ಸಲ ಹೇಳಿದ್ದೀನಿ? ಅವನಿಗೆ ಮೊದಲೇ ಕಣ್ಣು ಸರಿಯಾಗಿ ಕಾಣೋದಿಲ್ಲ. ಆವಕ್ಕಾಯಿ ಜಾಡಿ ಒಡೆದು ಹಾಕಿದ ನೋಡು!" ಬೆಳಗ್ಗೆಯೇ ಬೈಯುತ್ತಿದ್ದಳು ನನ್ನ ಹೆಂಡತಿ. ಪ್ರತಿ ದಿನ ನನ್ನ ಮೇಲೆ ಬೀಳಬೇಕಿದ್ದ ಮಳೆಯ ಹನಿಗಳು ಈ ದಿನ ನಮ್ಮ ಕೆಲಸದವಳ ಮೇಲೆ ಬಿದ್ದಿದ್ದವು. ಹಾಗೆಂದು ನನ್ನ ಕೋಟಾ ರದ್ದಾಗುತ್ತದೆಂಬ ಕಾನೂನೇನೂ ಇಲ್ಲ.

"ಅವನ ಬದುಕನ್ನು ಬಂಡೆಗಲ್ಲಾಗಿ ಮಾಡಿದ್ದಾನಮ್ಮಾ ಆ ದೇವರು" ಎಂದಳು ನಮ್ಮ ಕೆಲಸದಾಕೆ.

"ನಾನು ಹೇಳಿದ್ದು ಅವನನ್ನು ಇಲ್ಲಿಗೆ ಕರಕೊಂಡು ಬರಬೇಡಾಂತ" ಅಡುಗೆಮನೆಯಿಂದ ಗೊಣಗುತ್ತಾ ಬಂದಳು ನನ್ನ ಹೆಂಡತಿ. ಆಕೆ ನಕ್ಕಿದ್ದನ್ನು ನಾನು ಒಂದು ಸಲ ಕೂಡ ನೋಡಿರಲಿಲ್ಲ. ಕೆಲಸದಾಕೆಯಲ್ಲ, ನನ್ನ ಹೆಂಡತಿ.

ಮದುವೆಯಾದ ಈ ನಲವತ್ತು ವರ್ಷಗಳಲ್ಲಿ ಒಂದು ಸಲ ಕೂಡ ನಗಲಿಲ್ಲ.

ನನ್ನ ಮಾವನವರು ತ್ರಿಕಾಲಜ್ಞಾನಿ. ದೇಶವೇ ಹೆಮ್ಮೆ ಪಡುವಂತಹ ಜ್ಯೋತಿಷಿ. ಆದರೆ ಮಗಳ ಭವಿಷ್ಯತ್ತನ್ನು ಸರಿಯಾಗಿ ಅಂದಾಜು ಮಾಡಲಿಲ್ಲವೇನೋ, ಮಂದಸ್ಮಿತ ಅಂತ ಹೆಸರಿಟ್ಟಿದ್ದರು. ಆತನ ಭವಿಷ್ಯತ್‌ದರ್ಶನ ಇಷ್ಟು ದಾರುಣವಾಗಿ ಹೇಗೆ ವಿಫಲವಾಯಿತೆಂದು ಆತನನ್ನೇ ಕೇಳಿದೆ.

ನನ್ನನ್ನು ಒಬ್ಬ ಹುಚ್ಚನನ್ನು ನೋಡುವಂತೆ ನೋಡಿ "ಮದುವೆಗೆ ಮೊದಲು ವಿಪರೀತ ನಗುತ್ತಿದ್ದಳು" ಎಂದರು ಕ್ಲುಪ್ತವಾಗಿ.

ಇನ್ನೇನು ಮಾತಾಡಲಿ?

ವಿಚಿತ್ರವೇನೆಂದರೆ ಆ ದಿನ ಹಿರಣ್ಯಕಶಿಪುವಿನ ಹೊಟ್ಟೆಯಲ್ಲಿ ಭಕ್ತನಾದ ಪ್ರಹ್ಲಾದ ಹುಟ್ಟಿದ. ಇಲ್ಲಿ ಇದಕ್ಕೆ ತಿರುಗುಮುರುಗು. ಪರಮ ನಿಷ್ಠಾಗರಿಷ್ಟನಾದ ನನ್ನ ಮಾವನವರಿಗೆ ಈಕೆ ಹುಟ್ಟಿದಳು. ನನ್ನ ವಿಷಯ ಕೂಡ ಅಂತಹದ್ದೇ. ಪರಮಭಕ್ತನಾದ ನನಗೆ ಹುಟ್ಟಿದ ಮಗಳು ಕೂಡ ಅಮ್ಮನ ರೀತಿಯವಳೇ. ನನ್ನ ಅಳಿಯ ಬಾಯಲ್ಲಿ ನಾಲಗೆ ಇಲ್ಲದವನು. ಪಾಪ, ಅವನನ್ನು ನನ್ನ ಮಗಳು ಚೆನ್ನಾಗಿ ಆಟವಾಡಿಸುತ್ತಿದ್ದಳು.

ಒಂದೇ ಒಂದು ಅದೃಷ್ಟವೇನೆಂದರೆ ನನ್ನ ಮಗ ನನ್ನ ವಾರಸುದಾರ. ಹಿಂದಿನ ಜನ್ಮದಲ್ಲಿ ಎಷ್ಟು ಪುಣ್ಯ ಮಾಡಿದ್ದೆನೋ ಏನೋ, ಅವನು ಹುಟ್ಟಿದ. ಭಗವಂತನ ದಯೆಯಿಂದ ಇನ್‌ಫೋಸಿಸ್‌ನಲ್ಲಿ ಬಹಳ ದೊಡ್ಡ ಉದ್ಯೋಗದಲ್ಲಿದ್ದಾನೆ.

ನನ್ನ ಹೆಂಡತಿ ನನ್ನೊಂದಿಗೆ ಕಬಡ್ಡಿ ಆಡಲು ಕಾರಣ ನನ್ನ ಬೋಳು ತಲೆ. ನಿಮಗೆ ಆಶ್ಚರ್ಯವಾಗಬಹುದು. ಆದರೆ ನಿಜ. ಕೇದಾರ್‌ನಾಥ್‌ನಿಂದ ಕನ್ಯಾಕುಮಾರಿಯವರೆಗೆ ನಾನು ನೋಡದಿರುವ ಕ್ಷೇತ್ರವಿಲ್ಲ. ವರ್ಷಕ್ಕೆ ಹನ್ನೊಂದು ತಿಂಗಳು ಬೋಳು ತಲೆಯಲ್ಲಿರುತ್ತೇನೆ. ಮೊದಲು ತಿರುಪತಿಯಲ್ಲಿ, ಮತ್ತೆ ಸ್ವಲ್ಪ ತಲೆಗೂದಲು ಬೆಳೆದೊಡನೆ ಅನ್ನವರಂನಲ್ಲಿ... ಆಮೇಲೆ... ಬೇಡ ಬಿಡಿ. ಹೇಳುತ್ತಾ ಹೋದರೆ ಆ ಪಟ್ಟಿ ಮುಗಿಯುವುದಿಲ್ಲ. ನನ್ನ ಅನುಮಾನ ಏನೆಂದರೆ... ನನ್ನ ಕಡೆ ಆಕೆ ತೋರುವ ಉದಾಸೀನದ ನೋಟಕ್ಕೆ ಕಾರಣ ಈ ನನ್ನ ಬೋಳುತಲೆಯೇ!

ನನ್ನ ಬಗ್ಗೆ ಆಕೆಯ ಔದಾಸೀನ್ಯಕ್ಕೆ ನಿಜವಾದ ಕಾರಣ ಇನ್ನೂ ಒಂದಿತ್ತು. ನಿವೃತ್ತಿಯ ನಂತರ ಸುಬ್ಬರಾಜುವಿನೊಂದಿಗೆ ಸೇರಿ ವ್ಯಾಪಾರ ಶುರು ಮಾಡಿ, ಉದ್ಯೋಗದಲ್ಲಿ ಸಂಪಾದಿಸಿದ್ದನ್ನೆಲ್ಲಾ (ನಿವೃತ್ತಿಯ ಆದಾಯಗಳೂ ಸೇರಿ) ಕಳೆದುಕೊಂಡಿದ್ದು. ಸತ್ಯವಾಗಿಯೂ ಇದು